## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 568(658) |
| ಸದಸ್ಯರ ಹೆಸರು | : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 09.03.2026 |
| ಉತ್ತರಿಸುವವರು | : ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಖಾಯಂ ಬೋಧಕರು ಮತ್ತು ಕೆಲವು ಅತಿಥಿ ಉಪನ್ಯಾಸಕರು 'ನಕಲಿ' ಎಂ.ಫಿಲ್. ಮತ್ತು ಪಿಎಚ್.ಡಿ ಪ್ರಮಾಣಪತ್ರ ಹಾಗೂ ಕೆಲವರು ವಿಶೇಷಚೇತನರು 'ನಕಲಿ' ಪ್ರಮಾಣಪತ್ರ ನೀಡಿ ಕೆಲಸಕ್ಕೆ ಸೇರಿದ್ದಾರೆ ಎಂಬ ದೂರುಗಳು ಕೇಳಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರಕ್ಕೆ ದೂರುಗಳು ಬಂದಿರುತ್ತವೆ. |
| (ಆ) | ಬಂದಿದ್ದಲ್ಲಿ, ಅಭ್ಯರ್ಥಿಗಳು ಹಾಜರುಪಡಿಸಿರುವ ಪ್ರಮಾಣಪತ್ರಗಳ ನೈಜತೆ ಪರಿಶೀಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಅಭ್ಯರ್ಥಿಗಳು ಹಾಜರುಪಡಿಸಿರುವ ಪ್ರಮಾಣಪತ್ರಗಳ ನೈಜತೆ ಪರಿಶೀಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ;<br><br>1. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರ ಕರ್ತವ್ಯಕ್ಕೆ ಆಯ್ಕೆಯಾಗುವ ಕೆಲವು ಅಭ್ಯರ್ಥಿಗಳು ನಕಲಿ ದಾಖಲೆಗಳನ್ನು ಸಲ್ಲಿಸುತ್ತಿರುವುದಾಗಿ ದೂರುಗಳು ಸ್ವೀಕೃತವಾಗುತ್ತಿದ್ದ ಹಿನ್ನೆಲೆಯಲ್ಲಿ, ಕರ್ತವ್ಯಕ್ಕೆ ಹಾಜರಾಗುವ ಅತಿಥಿ ಉಪನ್ಯಾಸಕ ಅಭ್ಯರ್ಥಿಗಳ ಸ್ನಾತಕೋತ್ತರ ಪದವಿ, ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ. ಎಂ.ಫಿಲ್. ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಂಬಂದಪಟ್ಟ ವಿಶ್ವವಿದ್ಯಾಲಯದಿಂದ ಹಾಗೂ ವಿಶೇಷಚೇತನರ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ನೈಜತೆ ವರದಿಯನ್ನು ಪಡೆಯಲು ಸಂಬಂದಿಸಿದ ಕಾಲೇಜಿನ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿರುತ್ತದೆ.<br>2. ಮುಂದುವರೆದು, ಆನ್‌ಲೈನ್ ಕೌನ್ಸಲಿಂಗ್ ಮೂಲಕ ಕಾಲೇಜು ಆಯ್ಕೆ ಮಾಡಿಕೊಂಡು, |

| | | |
|---|---|---|
| | | ಕರ್ತವ್ಯಕ್ಕೆ ಹಾಜರಾಗಿರುವ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ಪದವಿ ಅಂಕಪಟ್ಟಿ ಮತ್ತು ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ, ಎಂ.ಫಿಲ್ ಹಾಗೂ ವಿಶೇಷಚೇತನರ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರಗಳ ನೈಜತೆ ವರದಿಗಳನ್ನು ಪಡೆಯಲು ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳ ಕುರಿತು ಅಧಿಕೃತ ಪರಿಶೀಲನಾ ಕಾರ್ಯವಿಧಾನವನ್ನು (Standard Operating Procedure–(SOP)) ಹೊರಡಿಸಲಾಗಿರುತ್ತದೆ. ಅಧಿಕೃತ ಪರಿಶೀಲನಾ ಕಾರ್ಯವಿಧಾನದ ಪ್ರತಿಯನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| (ಇ) | ಈಗಾಗಲೇ, ಪರಿಶೀಲಿಸಲಾಗಿರುವ ಪ್ರಮಾಣಪತ್ರಗಳ ನೈಜತೆ ಪೈಕಿ ಎಷ್ಟು ಸಂಖ್ಯೆಯ ಖಾಯಂ ಬೋಧಕರು ಮತ್ತು ಅತಿಥಿ ಉಪನ್ಯಾಸಕರು ಹಾಜರುಪಡಿಸಿರುವ ಪ್ರಮಾಣಪತ್ರಗಳು ನೈಜತೆಯಿಂದ ಕೂಡಿಲ್ಲದಿರುವುದು ದೃಡಪಟ್ಟಿದೆ; (ಜಿಲ್ಲಾವಾರು, ಪ್ರಮಾಣಪತ್ರವಾರು(ಎಂ.ಫಿಲ್. ಮತ್ತು ಪಿಎಚ್.ಡಿ & ವಿಶೇಷಚೇತನರು ಖಾಯಂ ಬೋಧಕರು ಮತ್ತು ಅತಿಥಿ ಉಪನ್ಯಾಸಕರು ಸಂಪೂರ್ಣ ವಿವರ ನೀಡುವುದು); | ಪರಿಶೀಲಿಸಲಾಗಿರುವ ಪ್ರಮಾಣಪತ್ರಗಳ ನೈಜತೆ ಪೈಕಿ ಒಟ್ಟು 20 ಅತಿಥಿ ಉಪನ್ಯಾಸಕರು ಹಾಜರುಪಡಿಸಿರುವ ದಾಖಲೆಗಳು ನೈಜತೆಯಿಂದ ಕೂಡಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಪ್ರಮಾಣ ಪತ್ರವಾರು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |
| (ಈ) | ನಕಲಿ ಪ್ರಮಾಣಪತ್ರಗಳನ್ನು ಹಾಜರುಪಡಿಸಿ ಕೆಲಸ ಗಿಟ್ಟಿಸಿಕೊಂಡವರ (ಖಾಯಂ ಬೋಧಕರು ಮತ್ತು ಅತಿಥಿ ಉಪನ್ಯಾಸಕರು) ವಿರುದ್ಧ ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಖಾಯಂ ಬೋಧಕರು ನಕಲಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿ ಕೆಲಸ ಗಿಟ್ಟಿಸಿಕೊಂಡಿದ್ದಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 20ರಡಿ ತಿಳಿಸಿರುವಂತೆ ಕ್ರಿಮಿನಲ್ ಮೊಕದ್ದಮೆ ಮತ್ತು ಶಿಸ್ತು ಕ್ರಮ ಜಾರಿಗೊಳಿಸಲಾಗುವುದು.<br><br>ಅತಿಥಿ ಉಪನ್ಯಾಸಕರು 'ನಕಲಿ' ಪ್ರಮಾಣ ಪತ್ರಗಳನ್ನು ಹಾಜರುಪಡಿಸಿ ಕೆಲಸ ಗಿಟ್ಟಿಸಿಕೊಂಡಿದ್ದಲ್ಲಿ, ಅಂತಹ ಅತಿಥಿ ಉಪನ್ಯಾಸಕರನ್ನು ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು. |

**ಸಂಖ್ಯೆ:ಇಡಿ 92 ಡಿಸಿಇ 2026(ಇ)**

(ಡಾ. ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ನೇವಿ-1/ಅಉದಾನ್ಯೆಪ/176/2025-26

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ
ಬೆಂಗಳೂರು, ದಿನಾಂಕ:17-02-2026

## ಕಾಲೇಜು ಹಂತದಲ್ಲಿ ಅತಿಥಿ ಉಪನ್ಯಾಸಕರ ಶೈಕ್ಷಣಿಕ ಮತ್ತು ಇತರೆ ಪ್ರಮಾಣಪತ್ರಗಳ ಅಧಿಕೃತ ಪರಿಶೀಲನಾ ಕಾರ್ಯವಿಧಾನ (Standard Operating Procedure- SOP)

*****

2025-26ನೇ ಶೈಕ್ಷಣಿಕ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿದ್ದ ವಿದ್ಯಾರ್ಹತೆ, ಸೇವಾ ಅನುಭವ, ವಿಕಲಚೇತನರ ಮಾಹಿತಿ, ಮತ್ತಿತರೆ ವಿವರಗಳನ್ನು ಆಧರಿಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಗತ್ಯವಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಈ ರೀತಿ ಆಯ್ಕೆಗೊಂಡು ಕರ್ತವ್ಯಕ್ಕೆ ಹಾಜರಾಗುವ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ಪದವಿ ಅಂಕಪಟ್ಟಿ ಮತ್ತು ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ, ಎಂ.ಫಿಲ್ ಹಾಗೂ ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರಗಳ ನೈಜತೆ ವರದಿಯನ್ನು ಕಡ್ಡಾಯವಾಗಿ ಸಂಬಂದಪಟ್ಟ ವಿಶ್ವವಿದ್ಯಾಲಯ/ ಸಂಸ್ಥೆಗಳಿಂದ ಒಂದು ಬಾರಿಯ ಕ್ರಮವಾಗಿ ಪಡೆಯುವಂತೆ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ನೇವಿ-1/ಅಉನೇ/28/2025-26, ದಿನಾಂಕ:08.12.2025 ರಲ್ಲಿ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, 2025-26ನೇ ಸಾಲಿನಲ್ಲಿ ನಡೆದ ಆನ್‌ಲೈನ್ ಕೌನ್ಸಲಿಂಗ್ ಮೂಲಕ ಕಾಲೇಜು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾಗಿರುವ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಎನ್‌ಇಟಿ, ಎಸ್‌ಎಲ್‌ಇಟಿ, ಕೆ-ಎಸ್‌ಇಟಿ, ಪಿಹೆಚ್.ಡಿ, ಎಂ.ಫಿಲ್ ಅರ್ಹತಾ ಪ್ರಮಾಣ ಪತ್ರಗಳು ಹಾಗೂ ವಿಕಲಚೇತನ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಅರ್ಹತಾ ಪ್ರಮಾಣ ಪತ್ರ ಇವುಗಳ ನೈಜತೆ ವರದಿಗಳನ್ನು ಪಡೆಯಲು ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳ ಕುರಿತು ಸಿದ್ಧಪಡಿಸಿರುವ ಅಧಿಕೃತ ಪರಿಶೀಲನಾ ಕಾರ್ಯವಿಧಾನವನ್ನು (Standard Operating Procedure)ಈ ಕೆಳಕಂಡಂತೆ ನೀಡಲಾಗಿದೆ.

### 1. ಸ್ನಾತಕೋತ್ತರ (PG), ಎಂ.ಫಿಲ್ (MPhil) ಮತ್ತು ಪಿಹೆಚ್.ಡಿ (PhD) ಪದವಿ ಪ್ರಮಾಣಪತ್ರಗಳು:

ಅತಿಥಿ ಉಪನ್ಯಾಸಕರ ಶೈಕ್ಷಣಿಕ ಅರ್ಹತೆಗಳಾದ ಸ್ನಾತಕೋತ್ತರ (PG), ಎಂ.ಫಿಲ್ (MPhil) ಮತ್ತು ಪಿಹೆಚ್.ಡಿ (PhD) ಪದವಿ ಪ್ರಮಾಣಪತ್ರಗಳ ನೈಜತೆ ಪರಿಶೀಲನೆಗಾಗಿ ಪ್ರತಿಯೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಕೆಳಗಿನ ಕಾರ್ಯವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು:

**ಪರಿಶೀಲನಾ ಸಮಿತಿಯ ರಚನೆ;**

- ಪ್ರತಿಯೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡ್ಡಾಯವಾಗಿ 'ಪ್ರಮಾಣಪತ್ರ ಪರಿಶೀಲನಾ ಸಮಿತಿ'ಯನ್ನು ರಚಿಸಬೇಕು.
- ಕಾಲೇಜಿನ ಪ್ರಾಂಶುಪಾಲರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.
- ಎಲ್ಲಾ ವಿಷಯಗಳ ವಿಭಾಗದ ಮುಖ್ಯಸ್ಥರು (HODs) ಈ ಸಮಿತಿಯ ಸದಸ್ಯರಾಗಿರುತ್ತಾರೆ.

**ಪ್ರಾಥಮಿಕ ಪರಿಶೀಲನೆ ಮತ್ತು ಪಾವತಿ;**

- ಪದವಿ ಪ್ರಮಾಣಪತ್ರವು UGC ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ನೀಡಲ್ಪಟ್ಟಿದೆಯೇ ಎಂಬುದನ್ನು ಪ್ರಾಂಶುಪಾಲರು ಖಚಿತಪಡಿಸಿಕೊಳ್ಳಬೇಕು.

- ಸ್ನಾತಕೋತ್ತರ (PG), ಎಂ.ಫಿಲ್ (MPhil) ಮತ್ತು ಪಿಹೆಚ್.ಡಿ (PhD) ಪದವಿ ಪ್ರಮಾಣಪತ್ರಗಳ ನೈಜತೆ ಪರಿಶೀಲನೆ ಸಂಬಂಧ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ, ಪರಿಶೀಲನಾ ಶುಲ್ಕ ಮತ್ತು ಅರ್ಜಿ ಸಲ್ಲಿಸುವ ವಿಧಾನವನ್ನು (ಆನ್‌ಲೈನ್/ಇಮೇಲ್/ಪತ್ರ) ತಿಳಿದುಕೊಳ್ಳಬೇಕು.
- ನಿಗಧಿತ ಪರಿಶೀಲನಾ ಶುಲ್ಕ ಪಾವತಿಸುವುದಿದ್ದಲ್ಲಿ, ಅತಿಥಿ ಉಪನ್ಯಾಸಕರಿಂದ ಸಂಗ್ರಹಿಸಬೇಕು.
- **ಗಮನಿಸಿ:** ಶುಲ್ಕ ಪಾವತಿ ಅಥವಾ ವಿಶ್ವವಿದ್ಯಾಲಯದೊಂದಿಗಿನ ಯಾವುದೇ ಪತ್ರವ್ಯವಹಾರದಲ್ಲಿ ಅತಿಥಿ ಉಪನ್ಯಾಸಕರನ್ನು ನೇರವಾಗಿ ತೊಡಗಿಸಿಕೊಳ್ಳಬಾರದು.

**ವರದಿ ನಿರ್ವಹಣೆ (Handling Verification Reports)**

ಅತಿಥಿ ಉಪನ್ಯಾಸಕರ ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳಿಂದ ವರದಿಗಳು ಬಂದ ನಂತರ, ಕಾಲೇಜು ಮಟ್ಟದ ಸಮಿತಿಯು ವರದಿಯ ಸ್ವರೂಪಕ್ಕೆ ಅನುಗುಣವಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:

- **ಗೌಪ್ಯತೆ ಕಾಯ್ದುಕೊಳ್ಳುವುದು:** ವಿಶ್ವವಿದ್ಯಾಲಯಗಳಿಗೆ ನಡೆಸಲಾದ ಪತ್ರ ವ್ಯವಹಾರಗಳ ಬಗ್ಗೆ ಹಾಗೂ ಸ್ವೀಕರಿಸಲಾದ ಎಲ್ಲಾ ಪರಿಶೀಲನಾ ವರದಿಗಳನ್ನು ಅತ್ಯಂತ ಗೌಪ್ಯವಾಗಿಡಬೇಕು ಮತ್ತು ಇವುಗಳನ್ನು ಬಹಿರಂಗಪಡಿಸುವಂತಿಲ್ಲ.

  ನೈಜತೆ ವರದಿಯನ್ನು ಪಡೆಯುವ ಬಗ್ಗೆ ವಿಶ್ವವಿದ್ಯಾಲಯಗಳು/ ಸಂಸ್ಥೆಗಳೊಂದಿಗೆ Followup ಮಾಡಿ ನೈಜತೆ ವರದಿಯನ್ನು ತಂದುಕೊಡುವಂತೆ ಅತಿಥಿ ಉಪನ್ಯಾಸಕರಿಗೆ ಸೂಚಿಸುವಂತಿಲ್ಲ.

- **"ನಕಲಿ ಅಥವಾ ಅಮಾನ್ಯ" ವರದಿಗಳು (Reports that say certificates are Fake/Invalid):**

  ಒಂದು ವೇಳೆ ವಿಶ್ವವಿದ್ಯಾಲಯವು ನೀಡಿದ ಪದವಿಯು **ನಕಲಿ** ಅಥವಾ **ಅಮಾನ್ಯ** ಎಂದು ವರದಿಯಲ್ಲಿ ತಿಳಿಸಿದರೆ, ಅಂತಹ ಮಾಹಿತಿಯನ್ನು ತಕ್ಷಣವೇ **EMIS** (Education Management Information System) ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡವುದು ಹಾಗೂ ಸಂಬಂದಪಟ್ಟ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಸೇವೆಯಿಂದ **ಬಿಡುಗಡೆಗೊಳಿಸುವುದು (Relieved) ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.**

- **ಅಧಿಕೃತ ಅಥವಾ ಮಾನ್ಯ ವರದಿಗಳು (Genuine/Valid):**

  ಪದವಿ ಪ್ರಮಾಣಪತ್ರವು ಅಧಿಕೃತವಾಗಿದೆ/ ನೈಜವಾಗಿದೆ ಎಂದು ವಿಶ್ವವಿದ್ಯಾಲಯವು ದೃಢೀಕರಿಸಿದರೆ, ಆ ಮಾಹಿತಿಯನ್ನು ಸಹ ಇಲಾಖೆಯ **EMIS** ಪೋರ್ಟಲ್‌ನಲ್ಲಿ ದಾಖಲಿಸಬೇಕು.

2. **ವಿಶ್ವವಿದ್ಯಾಲಯದಿಂದ 'ಅಧಿಕೃತ' (Genuine) ಎಂಬ ವರದಿ ಬಂದಿದ್ದರೂ ಸಹ, ಆ ಪ್ರಮಾಣಪತ್ರದ ನೈಜತೆಯ ಬಗ್ಗೆ ಸಂದೇಹ/ ಆಕ್ಷೇಪಣೆ ಅಥವಾ ದೂರುಗಳು ಸಲ್ಲಿಕೆಯಾದಾಗ ನಡೆಸಬೇಕಾದ "ವಿವರವಾದ ತಪಾಸಣೆ" (Detailed Scrutiny) ಪ್ರಕ್ರಿಯೆಯನ್ನು ಇಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ:**

   - **ಸಂದೇಹಾಸ್ಪದ ಪ್ರಕರಣಗಳ ನಿರ್ವಹಣೆ (Processing of Doubtfull Cases)**

     ವಿಶ್ವವಿದ್ಯಾಲಯದಿಂದ 'ಅಧಿಕೃತ' (Genuine) ಎಂಬ ವರದಿ ಬಂದಿದ್ದರೂ ಸಹ, ಆ ಪ್ರಮಾಣಪತ್ರದ ನೈಜತೆಯ ಬಗ್ಗೆ ಸಂಶಯವಿದ್ದರೆ ಅಥವಾ ಆಕ್ಷೇಪಣೆಗಳು ವ್ಯಕ್ತವಾದರೆ ಸಮಿತಿಯು ಈ ಕೆಳಗಿನ ಹಂತಗಳನ್ನು ಅನುಸರಿಸಬೇಕು:

     **i. ಪಿಎಚ್.ಡಿ (PhD) ಪದವಿಯ ವಿವರವಾದ ಪರಿಶೀಲನೆ**

     ಕೇವಲ ಪದವಿ ಪ್ರಮಾಣಪತ್ರವನ್ನು ಮಾತ್ರ ಅವಲಂಬಿಸದೆ, **ಪಿಎಚ್.ಡಿ (PhD)** ಸಂಶೋಧನೆಯ ಪೂರ್ಣ ಪ್ರಮಾಣವನ್ನು ಈ ಕೆಳಗಿನ ದಾಖಲೆಗಳ ಮೂಲಕ ಮರು-ಪರಿಶೀಲಿಸಬೇಕು:

     - **ಪಿಎಚ್.ಡಿ ಪ್ರವೇಶ ಮತ್ತು ನೋಂದಣಿ:** ಅಭ್ಯರ್ಥಿಯ ಪಿಎಚ್.ಡಿ ಪ್ರವೇಶ ಪ್ರತಿ (Admission Copy) ಮತ್ತು ಅಧಿಕೃತ ನೋಂದಣಿ ಪ್ರತಿ (Registration Copy).

- **ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ:** ಸಂಶೋಧನಾ ಮಾರ್ಗದರ್ಶಕರ (Research Guide/Supervisor) ನೇಮಕಾತಿ ಆದೇಶ ಮತ್ತು ಸಂಶೋಧನಾ ಸಲಹಾ ಸಮಿತಿಯ (RAC) ರಚನೆಯ ಆದೇಶ.
- **ಶೈಕ್ಷಣಿಕ ಪ್ರಗತಿ:** ಕೋರ್ಸ್‌ವರ್ಕ್ ಪೂರ್ಣಗೊಳಿಸಿದ ಪ್ರಮಾಣಪತ್ರ ಅಥವಾ ಅಂಕಪಟ್ಟಿ ಹಾಗೂ ನಿಯಮಿತವಾಗಿ ಸಲ್ಲಿಸಲಾದ ಅರ್ಧವಾರ್ಷಿಕ ಪ್ರಗತಿ ವರದಿಗಳು (Half-Yearly Progress Reports).
- **ಸಂಶೋಧನಾ ಫಲಿತಾಂಶ:** ಪ್ರಕಟಿತ ಸಂಶೋಧನಾ ಲೇಖನಗಳು (Research Publications) ಮತ್ತು ಸಿದ್ಧಪಡಿಸಲಾದ ಮಹಾಪ್ರಬಂಧದ (PhD Thesis) ಹಾರ್ಡ್ ಕಾಪಿ.
- **ಅಂತಿಮ ಹಂತ:** ಬಹಿರಂಗ ಮೌಖಿಕ ಪರೀಕ್ಷೆಯ (Public Viva/Open Defence) ಅಧಿಸೂಚನೆ ಮತ್ತು ವಿಶ್ವವಿದ್ಯಾಲಯ ಹೊರಡಿಸಿದ ಪಿಎಚ್.ಡಿ ಪದವಿ ಪ್ರಕಟಣೆಯ ನೋಟಿಫಿಕೇಶನ್.

**ii. ಎಂ.ಫಿಲ್ ಮತ್ತು ಸ್ನಾತಕೋತ್ತರ (MPhil/PG) ಪದವಿ ಪರಿಶೀಲನೆ;**

ಈ ಪದವಿಗಳಿಗೆ ಸಂಬಂಧಿಸಿದಂತೆ ಸಮಿತಿಯು ಈ ಕೆಳಗಿನವುಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು:

- **ಅಂಕಪಟ್ಟಿಗಳು:** ಎಲ್ಲಾ ಸೆಮಿಸ್ಟರ್‌ಗಳ ಮೂಲ ಅಂಕಪಟ್ಟಿಗಳು.
- **ಪದವಿ ಪ್ರಮಾಣ ಪತ್ರ:** ಮೂಲ ಪದವಿ ಪ್ರಮಾಣಪತ್ರ ಮತ್ತು ವಿಶ್ವವಿದ್ಯಾಲಯವು ನೀಡಿದ ನೈಜತೆಯ ದೃಢೀಕರಣ ಪತ್ರ.

**ಕಾಲೇಜು ಮಟ್ಟದ ಅಂತಿಮ ವರದಿ ಸಿದ್ಧಪಡಿಸುವಿಕೆ:**

- ಮೇಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರ, ಪ್ರಮಾಣಪತ್ರ ಪರಿಶೀಲನಾ ಸಮಿತಿಯು ತನ್ನದೇ ಆದ **ಕಾಲೇಜು ಮಟ್ಟದ ಪರಿಶೀಲನಾ ವರದಿ** ಯನ್ನು ಸಿದ್ಧಪಡಿಸಬೇಕು.
- ಈ ಹಂತದಲ್ಲಿ ಪದವಿಯು ನಕಲಿ ಅಥವಾ ಅಮಾನ್ಯ ಎಂದು ಸಾಬೀತಾದರೆ, ಸಮಿತಿಯು ತನ್ನ ಸಂಶೋಧನೆಗಳನ್ನು ವರದಿಯಲ್ಲಿ ದಾಖಲಿಸಿ, ಅಭ್ಯರ್ಥಿಯನ್ನು ಬಿಡುಗಡೆಗೊಳಿಸಿ, ವರದಿಯನ್ನು EMIS ನಲ್ಲಿ ಅಪ್‌ಲೋಡ್ ಮಾಡಬೇಕು.
- ಒಂದು ವೇಳೆ ಅತಿಥಿ ಉಪನ್ಯಾಸಕರು ಕಾಲೇಜು ಮಟ್ಟದ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿದರೆ ಅಥವಾ ಆಕ್ಷೇಪಿಸಿದರೆ, ಅಂತಹ ಪ್ರಕರಣಗಳನ್ನು ಕೇಂದ್ರ ಕಚೇರಿಗೆ (Head Office) ವರ್ಗಾಯಿಸುವ ಪ್ರಕ್ರಿಯೆ ಈ ಕೆಳಗಿನಂತಿದೆ:

**ಮೇಲ್ಮನವಿ ಮತ್ತು ಕೇಂದ್ರ ಕಚೇರಿಯ ಕ್ರಮ (Appeals and Head Office Process)**

- **ಪ್ರಕರಣದ ವರ್ಗಾವಣೆ:** ಸಮಿತಿಯ ವರದಿಯನ್ನು ಸಂಬಂಧಿಸಿದ ಅತಿಥಿ ಉಪನ್ಯಾಸಕರು ಪ್ರಶ್ನಿಸಿದರೆ/ಆಕ್ಷೇಪಿಸದರೆ, ಅಂತಹ ಪ್ರಕರಣವನ್ನು ಮಾತ್ರ ಹೆಚ್ಚಿನ ತನಿಖೆಗಾಗಿ ಕೇಂದ್ರ ಕಚೇರಿಗೆ ಕಳುಹಿಸಬೇಕು.
- **ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ ದಾಖಲೆಗಳು:** ಪ್ರಕರಣವನ್ನು ವರ್ಗಾಯಿಸುವಾಗ ಪ್ರಾಂಶುಪಾಲರು ಈ ಕೆಳಗಿನವುಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು:
  - ಮೇಲೆ ತಿಳಿಸಿದ ಎಲ್ಲಾ ಸಂಬಂಧಿತ ಶೈಕ್ಷಣಿಕ ದಾಖಲೆಗಳು (PhD/PG/MPhil ಗೆ ಸಂಬಂಧಿಸಿದವು).
  - ಸಮಿತಿಯ ಸಂಶೋಧನೆಗಳನ್ನು ಒಳಗೊಂಡ 'ಕಾಲೇಜು ಮಟ್ಟದ ಪರಿಶೀಲನಾ ವರದಿ'.

- **ಅಂತಿಮ ತೀರ್ಮಾನ:** ಸಮಿತಿಯ ಸಂಶೋಧನೆ/ವರದಿಯ ಆಧಾರದ ಮೇಲೆ ಕೇಂದ್ರ ಕಛೇರಿಯಿಂದ ಸಂಬಂಧಪಟ್ಟ ಕಾಲೇಜಿಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗುತ್ತದೆ. ಈ ವಿಷಯದಲ್ಲಿ ಕೇಂದ್ರ ಕಚೇರಿಯ ಅಥವಾ ಆಯುಕ್ತರ ತೀರ್ಮಾನವೇ ಅಂತಿಮವಾಗಿರುತ್ತದೆ.

- **ನೋಡಲ್ ಅಧಿಕಾರಿ:** ಅತಿಥಿ ಉಪನ್ಯಾಸಕರ ಅಂಕಪಟ್ಟಿಗಳು / ಪ್ರಮಾಣ ಪತ್ರಗಳು ಹಾಗೂ ನೈಜತೆ ವರದಿಗಳ ಸಂಬಂದ ಕೇಂದ್ರ ಕಛೇರಿಯಲ್ಲಿ 'ಉಪ ನಿರ್ದೇಶಕರನ್ನು ನೋಡಲ್ ಅಧಿಕಾರಿಯನ್ನಾಗಿ' ನೇಮಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಪ್ರತಿ ಮಂಗಳವಾರ ಅಪರಾಹ್ನ ಸಂಪರ್ಕಿಸಬಹುದಾಗಿದೆ.

### 3. NET/ K-SET ಪ್ರಮಾಣಪತ್ರಗಳು:

ಅತಿಥಿ ಉಪನ್ಯಾಸಕರು ಸಲ್ಲಿಸಿರುವ ಅರ್ಹತಾ ಪರೀಕ್ಷೆಗಳ ಪ್ರಮಾಣಪತ್ರಗಳ ನೈಜತೆಯನ್ನು ದೃಢೀಕರಿಸಲು ಸಮಿತಿಯು ಈ ಕೆಳಗಿನ ಹಂತಗಳನ್ನು ಅನುಸರಿಸಬೇಕು:

#### 1. ಪರಿಶೀಲನಾ ಏಜೆನ್ಸಿಗಳ ಗುರುತಿಸುವಿಕೆ (Identification of Agencies)

ಪ್ರಮಾಣಪತ್ರದ ಪ್ರಕಾರವನ್ನು ಆಧರಿಸಿ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಪತ್ರವ್ಯವಹಾರ ನಡೆಸಬೇಕು:

- **NET ಪ್ರಮಾಣಪತ್ರಗಳು:** ಇವುಗಳ ನೈಜತೆ ಪರಿಶೀಲನೆಗಾಗಿ ಯುಜಿಸಿ (UGC) ಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ಲಭ್ಯವಿರುವ ವರ್ಷಗಳ ಪ್ರಮಾಣ ಪತ್ರಗಳ ನೈಜತೆ ವರದಿಯನ್ನು ಪಡೆದುಕೊಳ್ಳಬಹುದು ಅಥವಾ ಪ್ರಮಾಣಪತ್ರದಲ್ಲಿ ಲಭ್ಯವಿರುವ QR ಕೋಡ್ (QR Code) ಅನ್ನು ಸ್ಕ್ಯಾನ್ ಮಾಡುವ ಮೂಲಕ ಆನ್‌ಲೈನ್‌ನಲ್ಲಿ ತಕ್ಷಣವೇ ಅಧಿಕೃತ ಪರಿಶೀಲನೆಯನ್ನು ನಡೆಸಿ ನೈಜತೆಯನ್ನು ಖಚಿತ ಪಡಿಸಿಕೊಳ್ಳುವುದು.

- ಒಂದು ವೇಳೆ ಕೆಲವು ವರ್ಷಗಳ ಪ್ರಮಾಣ ಪತ್ರಗಳು ಯುಜಿಸಿ (UGC) ಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪರಿಶೀಲನೆಗೆ ಲಭ್ಯವಿಲ್ಲದಿದ್ದಲ್ಲಿ ಅಂತಹ ಪ್ರಮಾಣ ಪತ್ರಗಳ ಬಗ್ಗೆ ನವದೆಹಲಿಯ **ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA)** ಅಥವಾ ಸಂಬಂಧಪಟ್ಟ ಯುಜಿಸಿ (UGC) ಘಟಕವನ್ನು ಸಂಪರ್ಕಿಸಿ ನೈಜತೆಯನ್ನು ಖಚಿತ ಪಡಿಸಿಕೊಳ್ಳುವುದು.

- **K-SET ಪ್ರಮಾಣಪತ್ರಗಳು:** ಇವುಗಳ ನೈಜತೆ ಪರಿಶೀಲನೆಗಾಗಿ ಈ ಹಿಂದೆ ಪರೀಕ್ಷೆ ನಡೆಸಿದ **ಮೈಸೂರು ವಿಶ್ವವಿದ್ಯಾಲಯ**ವನ್ನು ಸಂಪರ್ಕಿಸಿ ನೈಜತೆಯನ್ನು ಖಚಿತ ಪಡಿಸಿಕೊಳ್ಳುವುದು ಅಥವಾ ಪ್ರಸ್ತುತ ಜವಾಬ್ದಾರಿ ಹೊಂದಿರುವ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA)** ಜಾಲತಾಣಕ್ಕೆ ಭೇಟಿ ನೀಡಿ ಪ್ರಮಾಣಪತ್ರದಲ್ಲಿ ಲಭ್ಯವಿರುವ QR ಕೋಡ್ (QR Code) ಅನ್ನು ಸ್ಕ್ಯಾನ್ ಮಾಡುವ ಮೂಲಕ ಆನ್‌ಲೈನ್‌ನಲ್ಲಿ ತಕ್ಷಣವೇ ಅಧಿಕೃತ ಪರಿಶೀಲನೆಯನ್ನು ನಡೆಸಿ ನೈಜತೆಯನ್ನು ಖಚಿತ ಪಡಿಸಿಕೊಳ್ಳುವುದು.

- ಅರ್ಹತಾ ಪ್ರಮಾಣಪತ್ರವು ಅಧಿಕೃತವಾಗಿದೆ / ನೈಜವಾಗಿದೆ ಎಂದು ವರದಿಯಾದಲ್ಲಿ ಸದರಿ ಮಾಹಿತಿಯನ್ನು ತಕ್ಷಣವೇ **EMIS** ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

  ಒಂದು ವೇಳೆ ಪ್ರಮಾಣಪತ್ರವು ನಕಲಿ / ನೈಜವಗಿರುವುದಿಲ್ಲ ಎಂದು ವರದಿಯಾದಲ್ಲಿ ಸದರಿ ಮಾಹಿತಿಯನ್ನು **EMIS** ನಲ್ಲಿ ದಾಖಲಿಸಿ, ನಿಯಮಾನುಸಾರ ಅರ್ಹತೆ ಹೊಂದಿಲ್ಲದ ಕಾರಣ ಸಂಬಂಧಪಟ್ಟ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಸೇವೆಯಿಂದ **ಬಿಡುಗಡೆಗೊಳಿಸುವುದು (Relieved) ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.**

- **NET/ K-SET ಪ್ರಮಾಣಪತ್ರಗಳಿಗೆ ಸಂಬಂದಿಸಿದಂತೆ** ಈಗಾಗಲೇ ನೈಜತೆ ವರದಿ ಸ್ವೀಕೃತವಾಗಿದ್ದಲ್ಲಿ / ಪಡೆದಿದ್ದಲ್ಲಿ ಮತ್ತೊಮ್ಮೆ ನೈಜತೆ ವರದಿಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ.

## 4. ವಿಕಲಚೇತನ ಅಭ್ಯರ್ಥಿಗಳ ಪ್ರಮಾಣಪತ್ರಗಳು:

ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/ನೇವಿ-1/ಅಉಆ/28/2025-26, ದಿನಾಂಕ:05.02.2026 ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಕಲಚೇತನ ಅತಿಥಿ ಉಪನ್ಯಾಸಕರ ಅಂಗವೈಕಲ್ಯತೆ ಬಗ್ಗೆ ಅವರನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪರೀಕ್ಷೆಗೊಳಪಡಿಸಿ, ನೈಜತೆ/ದೃಢೀಕರಣ ಪಡೆದಿರುವ ಬಗ್ಗೆ ಪರಿಶೀಲನೆ ನಡೆಸುವ ಸಂಬಂಧ ಉಸ್ತುವಾರಿಗಾಗಿ ಆಯಾ ಜಿಲ್ಲಾ ಕೇಂದ್ರಗಳಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ (Lead College) ಪ್ರಾಂಶುಪಾಲರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದ್ದು, ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಕಲಚೇತನ ಅತಿಥಿ ಉಪನ್ಯಾಸಕರ ಅಂಗವೈಕಲ್ಯತೆ ಬಗ್ಗೆ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನಿಯಮಾನುಸಾರ ಪರಿಶೀಲನೆ ನಡೆಸಿರುವ ಬಗ್ಗೆ ಉಸ್ತುವಾರಿ ವಹಿಸಿ, ಪರಿಶೀಲಿಸುವಂತೆ ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ವಿಕಲಚೇತನ ಅತಿಥಿ ಉಪನ್ಯಾಸಕರು ಸಲ್ಲಿಸುವ ಪ್ರಮಾಣಪತ್ರಗಳ ನೈಜತೆಯನ್ನು ದೃಢೀಕರಿಸಲು ಕಾಲೇಜು ಹಂತದ ಪ್ರಾಂಶುಪಾಲರ ಸಮಿತಿಯು ಈ ಕೆಳಗಿನ ಹಂತಗಳನ್ನು ಅನುಸರಿಸಬೇಕು:

- ವಿಕಲಚೇತನ ಅತಿಥಿ ಉಪನ್ಯಾಸಕರು ಸಲ್ಲಿಸುವ ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ, ಕಾಲೇಜಿನ ಪ್ರಾಂಶುಪಾಲರು ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು ಅಥವಾ ಜಿಲ್ಲಾ ವೈದ್ಯಕೀಯ ಮಂಡಳಿಗೆ (District Medical Board) ಸಮುಚಿತ ಮಾರ್ಗದಲ್ಲಿ ಪತ್ರ ವ್ಯವಹಾರ ನಡೆಸಿ ಸಂಬಂಧಪಟ್ಟ ಅತಿಥಿ ಉಪನ್ಯಾಸಕರನ್ನು ನಿಯಮಾನುಸಾರ ವೈದ್ಯಕೀಯ ಪರೀಕ್ಷೆಗೊಳಪಡಿಸಿ, ಅವರ ಅಂಗವಿಕಲತೆಯ ಪ್ರಮಾಣದ ಕುರಿತು ಅಧಿಕೃತ ವರದಿಯನ್ನು ಸಲ್ಲಿಸುವಂತೆ ಕೋರಬೇಕು.

- ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು ಅಥವಾ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ವರದಿ ಸ್ವೀಕೃತವಾದ ನಂತರ, ಅಂಗವಿಕಲತೆಯ ಶೇಕಡಾವಾರು ಪ್ರಮಾಣಕ್ಕೆ ಅನುಗುಣವಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:
    - ವೈದ್ಯಕೀಯ ವರದಿಯ ಪ್ರಕಾರ ಅಂಗವಿಕಲತೆಯ ಪ್ರಮಾಣವು **ಶೇ.40 ಅಥವಾ ಅದಕ್ಕಿಂತ ಹೆಚ್ಚು** ಎಂದು ದೃಢಪಟ್ಟಲ್ಲಿ, ಆ ಮಾಹಿತಿಯನ್ನು ತಕ್ಷಣವೇ ಇಲಾಖೆಯ **EMIS** ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.
    - ಒಂದು ವೇಳೆ ಅಂಗವಿಕಲತೆಯ ಪ್ರಮಾಣವು **ಶೇ.40 ಕ್ಕಿಂತ ಕಡಿಮೆ** ಎಂದು ವರದಿಯಾದಲ್ಲಿ, ಆ ಮಾಹಿತಿಯನ್ನು ತಕ್ಷಣವೇ ಇಲಾಖೆಯ **EMIS** ನಲ್ಲಿ ಪೋರ್ಟಲ್‌ನಲ್ಲಿ ದಾಖಲಿಸಬೇಕು ಹಾಗೂ ಇಂತಹ ಸಂದರ್ಭದಲ್ಲಿ, ನಿಯಮಾನುಸಾರ ತಪ್ಪು ಮಾಹಿತಿ ನೀಡಿದ ಕಾರಣ, ಸದರಿ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಸೇವೆಯಿಂದ **ಬಿಡುಗಡೆಗೊಳಿಸುವುದು (Relieved) ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.**

## 5. ಕಲ್ಯಾಣ ಕರ್ನಾಟಕ ಮೀಸಲಾತಿ ಪ್ರಮಾಣಪತ್ರಗಳು:

ಕಲ್ಯಾಣ ಕರ್ನಾಟಕ ಪ್ರದೇಶದ ಮೀಸಲಾತಿ ಸೌಲಭ್ಯವನ್ನು ಕೋರಿರುವ ಅಭ್ಯರ್ಥಿಗಳ ಪ್ರಮಾಣಪತ್ರಗಳ ನೈಜತೆಯನ್ನು ಖಚಿತಪಡಿಸಿಕೊಳ್ಳಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:

- ಅತಿಥಿ ಉಪನ್ಯಾಸಕರು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿರುವುದಾಗಿ 'ಅನುಬಂಧ-ಎ' (Annexure-A) ರಲ್ಲಿ ಸಲ್ಲಿಸಿರುವ ಅರ್ಹತಾ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ, ಕಾಲೇಜಿನ ಪ್ರಾಂಶುಪಾಲರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸಮುಚಿತ ಮಾರ್ಗದಲ್ಲಿ ಪತ್ರ ವ್ಯವಹಾರ ನಡೆಸಿ, ಸಂಬಂಧಪಟ್ಟ ಅತಿಥಿ ಉಪನ್ಯಾಸಕರು ನಿಯಮಾನುಸಾರ ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಸೇರಿರುವ ಬಗ್ಗೆ ನಿಯಮಾನುಸಾರ ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ತ್ರಿಸದಸ್ಯ ಸಮಿತಿಯು ನೀಡುವ 'ಅನುಬಂಧ-ಇ' (Annexure-E) ರಲ್ಲಿನ ಸಿಂಧುತ್ವ ಪ್ರಮಾಣಪತ್ರವನ್ನು (Validity Certificate) ಸಲ್ಲಿಸುವಂತೆ ಕೋರಬೇಕು.

- ಜಿಲ್ಲಾಧಿಕಾರಿಗಳ ಕಚೇರಿಯಿಂದ ವರದಿ ಅಥವಾ ಸಿಂಧುತ್ವ ಪ್ರಮಾಣಪತ್ರವು ಸ್ವೀಕೃತವಾದ ನಂತರ, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:
    - ಅತಿಥಿ ಉಪನ್ಯಾಸಕರು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿರುವುದಾಗಿ 'ಅನುಬಂಧ-ಇ' ರಲ್ಲಿ ಸಿಂಧುತ್ವ ಪ್ರಮಾಣಪತ್ರವು ಸ್ವೀಕೃತವಾದಲ್ಲಿ, ಸದರಿ ಮಾಹಿತಿಯನ್ನು ತಕ್ಷಣವೇ ಇಲಾಖೆಯ **EMIS** ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.
    - ಒಂದು ವೇಳೆ ಅತಿಥಿ ಉಪನ್ಯಾಸಕರು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿರುವುದಿಲ್ಲವೆಂದು ಅಥವಾ ಅರ್ಹತಾ ಪ್ರಮಾಣ ಪತ್ರವು ಅಮಾನ್ಯವೆಂದು ವರದಿಯಾದಲ್ಲಿ / ಕಂಡುಬಂದಲ್ಲಿ, ಆ ಮಾಹಿತಿಯನ್ನು ಇಲಾಖೆಯ **EMIS** ನಲ್ಲಿ ಅಪ್‌ಲೋಡ್ ಮಾಡಿ, ಸಂಬಂಧಪಟ್ಟ ಅಭ್ಯರ್ಥಿಗಳನ್ನು ತಕ್ಷಣವೇ ಸೇವೆಯಿಂದ **ಬಿಡುಗಡೆಗೊಳಿಸುವುದು (Relieved) ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.**
- **ಕಲ್ಯಾಣ ಕರ್ನಾಟಕ ಅರ್ಹತಾ ಪ್ರಮಾಣಪತ್ರಗಳಿಗೆ ಸಂಬಂದಿಸಿದಂತೆ** ಈಗಾಗಲೇ 'ಅನುಬಂಧ-ಇ' (Annexure-E) ರಲ್ಲಿ ಸಿಂಧುತ್ವ ಪ್ರಮಾಣಪತ್ರ ಸ್ವೀಕೃತವಾಗಿದ್ದಲ್ಲಿ / ಪಡೆದಿದ್ದಲ್ಲಿ ಮತ್ತೊಮ್ಮೆ ಪಡೆಯುವ ಅವಶ್ಯಕತೆ ಇರುವುದಿಲ್ಲ.

## 6. ಅತಿಥಿ ಉಪನ್ಯಾಸಕರ ಸೇವಾ ಪ್ರಮಾಣಪತ್ರಗಳು:

ಅತಿಥಿ ಉಪನ್ಯಾಸಕರು ಸಲ್ಲಿಸಿರುವ ಸೇವಾ ಪ್ರಮಾಣಪತ್ರಗಳ ಬಗ್ಗೆ ಸಂದೇಹ ಉಂಟಾದಲ್ಲಿ ಅಥವಾ ದೂರುಗಳು ಸಲ್ಲಿಕೆಯಾದಲ್ಲಿ, ಪರಿಶೀಲನಾ ಸಮಿತಿಯು ಈ ಕೆಳಗಿನ ಹಂತಗಳನ್ನು ಅನುಸರಿಸಬೇಕು:

- ಅತಿಥಿ ಉಪನ್ಯಾಸಕರು ಈ ಹಿಂದೆ ಸೇವೆ ಸಲ್ಲಿಸಿದ್ದಾಗಿ ಸಲ್ಲಿಸಿರುವ ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ, ಆಯಾ ಕಾಲೇಜಿನ ಪ್ರಾಂಶುಪಾಲರೊಂದಿಗೆ ಅಧಿಕೃತವಾಗಿ ಪತ್ರವ್ಯವಹಾರ ನಡೆಸಿ ಸೇವಾ ಪ್ರಮಾಣಪತ್ರಗಳ ನೈಜತೆಯನ್ನು ಕಡ್ಡಾಯವಾಗಿ ದೃಢೀಕರಿಸಿಕೊಳ್ಳಬೇಕು.
- ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ವರದಿ ಬಂದ ನಂತರ, ವರದಿಯ ಸ್ವರೂಪಕ್ಕೆ ಅನುಗುಣವಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:
    - ಒಂದು ವೇಳೆ ಸೇವಾ ಪ್ರಮಾಣಪತ್ರಗಳು ಸರಿಯಾಗಿದೆ / ಕ್ರಮಬದ್ಧವಾಗಿದೆ ಎಂದು ವರದಿಯಾದರೆ, ಆ ಮಾಹಿತಿಯನ್ನು ತಕ್ಷಣವೇ **EMIS** ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.
    - ಸೇವಾ ಪ್ರಮಾಣಪತ್ರಗಳು ನಕಲಿ ಅಥವಾ ಸರಿಯಲ್ಲ / ಕ್ರಮಬದ್ಧವಾಗಿರುವುದಿಲ್ಲ ಎಂದು ವರದಿಯಾದಲ್ಲಿ, ಆ ಮಾಹಿತಿಯನ್ನು ತಕ್ಷಣವೇ ಇಲಾಖೆಯ **EMIS** ನಲ್ಲಿ ದಾಖಲಿಸಬೇಕು ಹಾಗೂ ಸಂಬಂಧಪಟ್ಟ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಸೇವೆಯಿಂದ **ಬಿಡುಗಡೆಗೊಳಿಸುವುದು (Relieved) ಹಾಗೂ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.**

Magnum

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
2) ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಈ SOP ಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4) ಕಛೇರಿ ಪ್ರತಿ.

ಅನುಬಂಧ

| ಕ್ರ. ಸಂ. | ಜಿಲ್ಲೆ | ಪ್ರಮಾಣ ಪತ್ರಗಳ ವಿವರ | | | | ಒಟ್ಟು ಸಂಖ್ಯೆ |
|---|---|---|---|---|---|---|
| | | ವಿಶೇಷಚೇತನ | ಪಿಹೆಚ್.ಡಿ. | ಎಂ.ಫಿಲ್ | ಸ್ನಾತಕೋತ್ತರ ಪದವಿ ಅಂಕಪಟ್ಟಿ | |
| 1 | ಶಿವಮೊಗ್ಗ | | 1 | | | 1 |
| 2 | ಹಾವೇರಿ | 1 | 1 | | | 2 |
| 3 | ವಿಜಯನಗರ | | 1 | | | 1 |
| 4 | ಉಡುಪಿ | | 1 | | | 1 |
| 5 | ಕೋಲಾರ | | 1 | | 1 | 2 |
| 6 | ಹಾಸನ | | 1 | | | 1 |
| 7 | ಕಲಬುರಗಿ | | 4 | | | 4 |
| 8 | ಬೆಳಗಾವಿ | 3 | | | 1 | 4 |
| 9 | ವಿಜಯಪುರ | 1 | | | | 1 |
| 10 | ಬಾಗಲಕೋಟೆ | | | | 2 | 2 |
| 11 | ಉತ್ತರ ಕನ್ನಡ | | | 1 | | 1 |
| | **ಒಟ್ಟು** | **4** | **10** | **1** | **2** | **20** |